# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.2114/2025**

| | | |
|---|---|---|
| ಸಾಕ್ಷಿದಾರರ ಹೆಸರು | ಅಸ್ಲಾಂ | ಸಿ.ಡಬ್ಲ್ಯು–1 |
| ತಂದೆಯ ಹೆಸರು | ಅಬ್ದುಲ್ ಖಯುಮ್ | ಪಿ .ಡಬ್ಲ್ಯೂ–1 |
| ವಯಸ್ಸು | 35 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಚಿಕನ್ ಅಂಗಡಿ | ದಿನಾಂಕಃ |
| ವಾಸಃ | ಸಾಗರ | 09.06.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 2 ರಿಂದ 5 ಗೊತ್ತು. ಮೃತ ಅಬ್ದುಲ್ ಖಯುಮ್ ನನ್ನ ತಂದೆ. ನನ್ನ ತಂದೆ ಟಿವಿಸ್ ಬೈಕಿನ ಮೇಲೆ ಸ್ಟೇಷನರಿ ವ್ಯಾಪಾರ ಮಾಡುತ್ತಿದ್ದರು.

**2.** ದಿನಾಂಕ 09.06.2025 ರಂದು ನನ್ನ ತಂದೆ ಮನೆಯಿಂದ ಪೇಟೆ ವ್ಯಾಪಾರಕ್ಕೆಂದು ಟಿವಿಎಸ್ ಬೈಕಿನಲ್ಲಿ ಹೋಗಿದ್ದರು. ಚಾ.ಸಾ 3 ರವರು ಮಧ್ಯಾಹ್ನ 03.00 ಗಂಟೆ ಸುಮಾರಿಗೆ ಫೋನ್ ಮಾಡಿ ನನ್ನ ತಂದೆ ಅಬ್ದುಲ್ ಖಯುಮ್ ರವರು ಸಾಗರದ ಜನತಾ ಸ್ಕೂಲ್ ನ ಹತ್ತಿರ ರಸ್ತೆ ಅಪ್ ಇದ್ದ ಸ್ಥಳದಲ್ಲಿ ಪೇಟೆ ಕಡೆಗೆ ವ್ಯಾಪಾರಕ್ಕೆಂದು ಬರುತ್ತಿದ್ದಾಗ ಶಿವಮೊಗ್ಗ ಕಡೆಗೆ ಹೋಗುತ್ತಿದ್ದ ಬೈಕನ್ನು ಅತೀ ವೇಗವಾಗಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿತನು ಚಾಲನೆ ಮಾಡಿಕೊಂಡು ನನ್ನ ತಂದೆಯ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತವಾಗಿರುತ್ತದೆ. ಸದರಿ ಅಪಘಾತದಲ್ಲಿ ನನ್ನ ತಂದೆ ಗಾಯಗೊಂಡಿದ್ದರಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುವುದಾಗಿ ತಿಳಿಸಿದರು. ಕೂಡಲೇ ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ತಂದೆ ಮೃತ ಪಟ್ಟಿದ್ದರು. ನನ್ನ ತಂದೆಯ ತಲೆ ಮತ್ತು ರಟ್ಟೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದವು. ನಂತರ ಚಾ.ಸಾ 3 ರವರನ್ನು ವಿಚಾರಿಸಿದಾಗ ಅಪಘಾತದ ವಿಚಾರವನ್ನು ತಿಳಿಸಿ ಆರೋಪಿತರ ತಪ್ಪಿನಿಂದ ಅಪಘಾತವಾಯಿತು ಎಂದು ತಿಳಿಸಿದನು. ಸದರಿ ವಿಷಯವನ್ನು ನಾನು ಪೋಲಿಸ್ ಠಾಣೆಗೆ ಹೋಗಿ ತಿಳಿಸಿದೆ. ನಂತರ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ದೂರನ್ನು ಪಡೆದು ಪ್ರಕರಣ ದಾಖಲಿಸಿಕೊಂಡರು. ನಂತರ ನನ್ನ ತಂದೆ ನಡೆಸುತ್ತಿದ್ದ ಬೈಕನ್ನು

ಪೋಲಿಸ್ ಠಾಣೆಯಿಂದ ನಾನು ಬಿಡಿಸಿಕೊಂಡಿರುತ್ತೇನೆ. 1 ನೇ ಆರೋಪಿತನನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಬೈಕನ್ನು ನೋಡಿದರೆ ಗುರುತಿಸುತ್ತೇನೆ.

**3.** ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. 09.06.2025 ರಂದು ತೆಗೆದ ಫೋಟೋದಲ್ಲಿನ ತನ್ನ ಬೈಕನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ಸದರಿ ಫೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ. ಕೆ.ಜಿ.ಡಿ ರವರಿಂದಃ-</u>**

**1.** ನಿಪಿ-1 ರ ದೂರನ್ನು ನಮ್ಮ ವಕೀಲರು ಬರೆದುಕೊಟ್ಟರು. ನಿಪಿ-1 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆಗೆ ಸುಮಾರು 76 ವರ್ಷ ವಯಸ್ಸಾಗಿತ್ತು. 76 ವರ್ಷ ವಯಸ್ಸಾಗಿದ್ದಾಗ ಸಾಮಾನ್ಯವಾಗಿ ಕಣ್ಣು ಸರಿಯಾಗಿ ಕಾಣುವುದಿಲ್ಲ ಮತ್ತು ಕಿವಿ ಸರಿಯಾಗಿ ಕೇಳುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ದ್ವಿಚಕ್ರ ವಾಹನವನ್ನು ನಡೆಸಲು ಪರವಾನಗಿ ಇರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ದ್ವಿ ಚಕ್ರ ವಾಹನವನ್ನು ನಡೆಸಲು ಶಕ್ತಿ ಸಹ ಇರಲಿಲ್ಲ ಎಂದರೆ ಸರಿಯಲ್ಲ. ಈ ಘಟನೆಯ ಕಾಲಕ್ಕೆ ನನ್ನ ತಂದೆ ನಮ್ಮ ಮನೆಯಿಂದ ಸಾಗರ ಪೇಟೆ ಹೋಗುತ್ತಿದ್ದರು. 09.06.2025 ರಂದು ವಿಪರೀತ ಮಳೆ ಬರುತ್ತಿತ್ತು ಎಂದರೆ ಸರಿಯಲ್ಲ.

**2.** ಚಾ.ಸಾ 2 ಮತ್ತು 3 ನನ್ನ ಸಂಬಂಧಿಕರಲ್ಲ. ಆದರೆ ಮುಸ್ಲಿಂ ಧರ್ಮದವರು. ನನ್ನ ತಂದೆ ಸಾಗರ ಟೌನ್ ನಲ್ಲಿ ಸ್ಟೇಷನರಿ ವ್ಯಾಪಾರ ಮಾಡುತ್ತಿದ್ದರು. ಸದರಿ ವ್ಯಾಪಾರಕ್ಕೆ ನನ್ನ ತಂದೆ ಪರವಾನಗಿಯನ್ನು ಪಡೆದಿರಲಿಲ್ಲ. ಏಕೆಂದರೆ ಅವರು ಸಣ್ಣ ಪುಟ್ಟ ವ್ಯಾಪಾರವನ್ನು ಮಾತ್ರ ಮಾಡುತ್ತಿದ್ದರು. ನಾನು ಹೇಳಿದಂತೆ ಆರೋಪಿತನು ಆ ದಿನ ಅತೀ ವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿ ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ವಯಸ್ಸಾಗಿದ್ದರಿಂದ ಮತ್ತು ಅವರಿಗೆ ರಸ್ತೆ ಸರಿಯಾಗಿ ಕಾಣದ ಕಾರಣ ಸ್ವತಃ ಅವರೇ ರಸ್ತೆಯ ಮೇಲೆ ಬಿದ್ದು ಗಾಯಗೊಂಡರು ಎಂದರೆ ಸರಿಯಲ್ಲ. ಅಪಘಾತದ ಸ್ಥಳವು ನನ್ನ ತಂದೆ ಬರುತ್ತಿದ್ದ ಸ್ಥಳದಿಂದ ಅಪ್ ಇರಲಿಲ್ಲ ಎಂದರೆ ಸರಿಯಲ್ಲ.

**3.** ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ. ಆದ್ದರಿಂದ ಘಟನಾ ಸ್ಥಳ ಹೇಗೆ ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಕೀಲರು ಬರೆದ ದೂರಿಗೆ ನಾನು ಸಹಿ ಮಾಡಿ ಕೊಟ್ಟಿದ್ದೇನೆ ಎಂದರೆ ಸರಿ. ದೂರಿನಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿತರ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಮೋಟಾರ್ ವಾಹನಗಳ ಕಾಯಿದೆ ಅಡಿಯಲ್ಲಿ ನನ್ನ ತಂದೆ ಮೃತ ಪಟ್ಟಿದ್ದ ಕಾರಣ ನಾನು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಪರಿಹಾರ ಪಡೆಯುವ

ಸಲುವಾಗಿ ನಾನು ಸುಳ್ಳು ದೂರನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.